Literacy for a Billion

Movie: Bhakta Kumbhara
Year:

Song: Kanda Hariya Kande
Lyricist:

ಕಂಡೇ ಹರಿಯ ಕಂಡೇ

ಕಂಡೇ ಹರಿಯ ಕಂಡೇ

ದೇವಾಧಿ ದೇವಾ

ಧನುಜಾದಿ ವಂದ್ಯ ಧರಣೀಶನಾ

ದಿವ್ಯಚರಣ ಕಮಲಯುಗವಾ

ಕಂಡೇ ಹರಿಯ ಕಂಡೇ

ಪಾವನವಾಯಿತು ಕುಲಕೋಟಿಗಳೂ

ಪುಟಿದು ಹೋದವು ಪರಿತಾಪಗಳೂ

ಪುಟಿದು ಹೋದವು ಪರಿತಾಪಗಳು

ಬೇರೇನು ಬೇಕಿಲ್ಲ ಸಾಕು ಇದುವೆ

ಅನಂತ ಭಾಗ್ಯ

ಕಂಡೇ ಹರಿಯ ಕಂಡೇ

ಈ ಜೀವ ಜೊತೆಯಲ್ಲಿ

ಪರಮಾತ್ಮ ಕಲೆತೂ

ಈ ಜೀವ ಜೊತೆಯಲ್ಲಿ

ಪರಮಾತ್ಮ ಕಲೆತೂ

ಒಳಗೂ ಹೊರಗೂ

ಬೆಳಗುವ ಹಾಗೆ

ಸಖಿಯರ ಒಡನೇ

ಕುಣಿಯುವ ಹರಿಯಾ

ಚರಣಕಿಂಕಿಣೀ ನಾದದ ಇಂಪೂ

ರಾಗಭಾವಗಳು ಬೆಸೆದಿಹ ಸೊಂಪೂ

ಮಂದಹಾಸದಲಿ ನಿಂದ ಲಾಸ್ಯದಲಿ

ಕುಣಿದು ಕುಣಿಸೋ ಕಲಾಪವನೇ

ಕಂಡೇ ಹರಿಯ ಕಂಡೇ

ಅಸಮಾನ ಕಲೆಗಾರ ಇವ ನಮ್ಮ ವಿಠಲಾ

ರಸವಂತ ಗುಣವಂತ ಶೃಂಗಾರ ಲೋಲಾ

ಯೋಗಿಯೋ ಭೋಗಿಯೋ ಬಲ್ಲವರಿಲ್ಲ

ರಸಿಕ ರಂಗನಾ ಅನಂಗಪಿತನಾ

ಹಾವ ಭಾವಗಳ ಒಳಗಿನ ಮರ್ಮ

ತಿಳಿದು ನಾನಿಂದು ತಳೆದೆ ಆನಂದ

ಪ್ರಣವ ಬೆರೆತ ವಿಹಾರವನೆ

ಕಂಡೇ ಹರಿಯ ಕಂಡೇ

ದೇವಾಧಿ ದೇವಾ

ಧನುಜಾದಿ ವಂದ್ಯ ಧರಣೀಶನಾ

ದಿವ್ಯಚರಣ ಕಮಲಯುಗವಾ

ಕಂಡೇ ಹರಿಯ ಕಂಡೇ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*